ಮೂಲ ದಾವಾ ನಂಃ 41/2023

ಡಿ ಡಬ್ಲುಃ 01.

ಸಾಕ್ಷಿಯನ್ನು ದಿನಾಂಕಃ **12.02.2026.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್ ., ವಾದಿ ಪರ ವಕೀಲರಿಂದಃ**

ನನ್ನ ಮೂಲ ಊರು ಬಸಾಪುರಾ ನನಗೆ ವಾದಿಯ ಪರಿಚಯವಿಲ್ಲ. ನಾನು ಇವತ್ತಿನವರೆಗೂ ಅವರನ್ನು ನೋಡಿದ್ದು ಇರುವುದಿಲ್ಲ. ಈ ದಾವೆಯನ್ನು ದಾಖಲು ಮಾಡಿರುತ್ತಾರೆ ಎಂದರೆ, ಬಸವಣ್ಣೆಪ್ಪ ಎಂದು ನುಡಿಯುತ್ತಾರೆ. ವಾದಿಯು ಬಸಾಪುರದವರು ಎಂದರೆ ಅವರು, ಬಸಾಪುರದವರಲ್ಲ, ಕಲಘಟಗಿಯವರು ಎಂದು ನುಡಿಯುತ್ತಾರೆ. ವಾದಿಯು ಬಸಾಪುರಕ್ಕೆ ಬಂದು ಹೋಗಿ ಮಾಡುತ್ತಾರೆ, ಅವರಿಗೆ ಬಸಾಪುರ ಮತ್ತು ಕಲಘಟಗಿ ಎರಡು ಕಡೆ ಆಸ್ತಿಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ನಾನು ಸುಮಾರು 45 ವರ್ಷಗಳಿಂದ ವಾಸವಾಗಿದ್ದೇನೆ. ಬಸಾಪುರದಲ್ಲಿ ಸುಮಾರು ಎಷ್ಟು ಮನೆಗಳು ಇವೆ ಮತ್ತು ಎಷ್ಟು ಜನರಿದ್ದಾರೆ ಎಂದು ನನಗೆ ತಿಳಿದಿದೆ. ಸಾಮಾನ್ಯವಾಗಿ ಬಸಾಪುರದಲ್ಲಿ ಆರ್.ಸಿ.ಸಿ ಕಟ್ಟಡಗಳು ಇಲ್ಲ ಎಂದರೆ ಸರಿ. ಜನರು ಕಟ್ಟೆ ಮತ್ತು ಹಂಚಿನಿಂದ ನಿರ್ಮಾಣ ಮಾಡಿದ ಮನೆಗಳಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಅಂತಹ ಮನೆಗಳಲ್ಲಿ ವಾಸ ಮಾಡಿಕೊಂಡು, ತಮ್ಮ ತಮ್ಮ ಜಮೀನನ್ನು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಅಂತಹ ಜನರಲ್ಲಿ ವಾದಿಯೂ ಸಹ ಒಬ್ಬರು ಎಂದರೆ, ಬಸವಣ್ಣೆಪ್ಪ ಅಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನನಗೆ ದಾವಾಸ್ತಿ ಯಾವುದು ಎಂದು ಗೊತ್ತಿಲ್ಲ. ಅದೇ ರೀತಿ ವಾದಿಯು ಕಾಣಿಸಿದ ದಾವಾಸ್ತಿಯ ಚೆಕ್ ಬಂದಿಯೂ ಸಹ ನನಗೆ ಗೊತ್ತಿಲ್ಲ. ಇಲ್ಲಿಯವರೆಗೊ ನಾನು ದಾವಾಸ್ತಿ ಮನೆ ನಂಬರನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ನಾನು ಶಾಲೆ ಕಲಿತಿಲ್ಲ. ವಾದಿಯು ಯಾವ ಆಸ್ತಿಗೆ ಸಂಬಂಧಿಸಿದಂತೆ ಈ ದಾವೆಯನ್ನು ದಾಖಲು ಮಾಡಿರುತ್ತಾರೆಂದು ನಾನು ವಕೀಲರಿಂದಕೇಳಿ ತಿಳಿದುಕೊಳ್ಳಲು ಪ್ರಯತ್ನಿಸಿರುತ್ತೇನೆಯೇ ಎಂದರೆ, ಸಾಕ್ಷಿಯು ಅವರೇನು ನನಗೇನು ಹೇಳಿಲ್ಲ ಎಂದು ನುಡಿಯುತ್ತಾರೆ. ಯಾವ ಆಸ್ತಿಗೆ ಸಂಬಂಧಿಸಿದಂತೆ ನಾನು ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದು ನನಗೆ ಗೊತ್ತಿದೆ. ಯಾವ ದಾವಾಸ್ತಿ ಅಥವಾ ಮನೆಗೆ ಸಂಬಂಧಿಸಿದಂತೆ, ಪ್ರತಿರೋಧವಾಗಿ ನಾನು ನನ್ನ ತಕರಾರನ್ನು ಸಲ್ಲಿಸಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿದ್ದೇನೆಂದು ನನಗೆ ನಿಖರವಾಗಿ ಮಾಹಿತಿ ಇದೆಯೇ ಎಂದರೆ, ಜಾಗದ ಬಗ್ಗೆ ತಕರಾರು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ.

ವಾದಿಗೆ ಬಸಾಪುರ ಗ್ರಾಮದಲ್ಲಿ ನಾನು ತಕರಾರು ಮಾಡಿದ್ದು ಇರುವುದಿಲ್ಲ. ನಾನು ಸಲ್ಲಿಸಿದ ತಕರಾರು ಆಂಗ್ಲ ಭಾಷೆಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ತಕರಾರಿಗೆ ಮಾಹಿತಿಯನ್ನು ನಮ್ಮ ವಕೀಲರ ಬಳಿ ಕೊಟ್ಟಿರುತ್ತೇನೆ. ಮಾಹಿತಿಯೊಂದಿಗೆ ನಮ್ಮ ವಕೀಲರಿಗೆ ನಾನು ನಮ್ಮ ಜಾಗದ ಉತಾರ್, ಮನೆಯ ಕರೆಂಟ್ ಬಿಲ್, ಕರ ಪಾವತಿ ಬಿಲ್ಲುಗಳನ್ನು ಕೊಟ್ಟಿರುತ್ತೇನೆ. ಈ ಮೇಲೆ ಹೇಳಿದಂತೆ ನನ್ನ ಬಳಿ ದಾಖಲಾತಿಗಳು ಇವೆ ಎಂದು ತಕರಾರಿನಲ್ಲಿ ಬರೆಸಿರುತ್ತೇವೆ. ಸದರಿ ದಾಖಲಾತಿಗಳನ್ನು ಈ ದಾವೆಯಲ್ಲಿ ಹಾಜರುಮಾಡಿದ್ದೇವೆ. ಅವುಗಳನ್ನು ನಾವು ಹಾಜರು ಮಾಡಿದ್ದರೆ ಅವು ಕಡತದಲ್ಲಿ ಇರುತ್ತಿದ್ದವು ಎಂದರೆ , ಸಾಕ್ಷಿಯು ನಾವು ವಕೀಲರಿಗೆ ಕೊಟ್ಟದ್ದೆವು ಎಂದು ನುಡಿಯುತ್ತಾರೆ. ನಾನು ನನ್ನ ತಕರಾರಿನಲ್ಲಿ ನಮೂದು ಮಾಡಿದ ಎಲ್ಲಾ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಾನು ತಕರಾರಿನಲ್ಲಿ ನಮೂದು ಮಾಡಿದ ಸಂಗತಿಗಳು ಸತ್ಯವಿರುತ್ತವೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ, ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ವಾದಿಯು ಬಸಾಪುರ ಗ್ರಾಮದಲ್ಲಿ ವಾಸವಾಗಿಲ್ಲ ಎಂದು ತೋರಿಸಲು ದಾಖಲಾತಿಗಳನ್ನು ಹಾಜರು ಮಾಡಿದ್ದೀರಾ ಎಂದರೆ ಇಲ್ಲ. ನಾನು ಮತ್ತು 2 ರಿಂದ 6 ನೇ ಪ್ರತಿವಾದಿಯರು ದಾವಾಸ್ತಿಗೆ ಸಂಬಂಧಪಟ್ಟಂತೆ ನಾವು ತಂಟೆ ತಕರಾರು

ಮಾಡಿದ್ದರಿಂದ, ವಾದಿ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದರು ಎಂದರೆ ಇಲ್ಲ. ಈ ವಿಷಯ ನನಗೆ ತಿಳಿದಿದ್ದರೂ ಸಹಿತ, ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯ ಪಶ್ಚಿಮ ದಿಕ್ಕಿಗೆ ನಾವು ಅತಿಕ್ರಮಣ ಮಾಡಲು ತಯಾರಿ ನಡೆಸಿದ್ದೆವು ಎಂದರೆ ಸರಿಯಲ್ಲ. ನಾವು ಅತಿಕ್ರಮಣ ಮಾಡಲು ತಯಾರಿ ನಡೆಸಿದ್ದರಿಂದಲೇ ವಾದಿ ನಮ್ಮ ವಿರುದ್ಧ ಈ ದಾವೆಯನ್ನು ದಾಖಲು ಮಾಡಿರುತ್ತಾರೆ ಎಂದರೆ, ಅದೆಲ್ಲ ಸುಳ್ಳು ಎಂದು ನುಡಿಯುತ್ತಾರೆ. ದಾವಾಸ್ತಿಗೆ ಸಂಬಂಧಿಸಿದ ಬೇಲಿಯನ್ನು ನಾವು ಸಂಪೂರ್ಣವಾಗಿ ನಾಶ ಮಾಡಿರುತ್ತೇವೆ ಎಂದರೆ ಇಲ್ಲ.

ನಮ್ಮ ಆಸ್ತಿಯ ನಂಬರ್ ನಾನು ಹೇಳಬಲ್ಲೆ. ನಮ್ಮ ಮನೆಯ ನಂಬರ್-03. ಸದರಿ ಆಸ್ತಿ ಮಂಜೂರಿಗೆ ಸಂಬಂಧಿಸಿದಂತೆ, ನಾವು ಎರಡು ಬಾರಿ ಪಂಚಾಯಿತಿಗೆ ಅರ್ಜಿಯನ್ನು ಸಲ್ಲಿಸಿದ್ದೇವು. ಸುಮಾರು 45 ವರ್ಷಗಳ ಹಿಂದೆ ನಮ್ಮ ಅಜ್ಜನು ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ಜಾಗೆ ನಮಗೆ ಬೇಕು ಎಂದು ಅರ್ಜಿಯನ್ನು ಸಲ್ಲಿಸಿದ್ದರು. ಸದರಿ ಕಾಗದ ಪತ್ರಗಳು ನನ್ನ ಬಳಿ ಇವೆ. ಸದರಿ ದಾಖಲಾತಿಗಳಲ್ಲಿ ಏನು ಬರೆದಿದೆ ಎಂದು ನಾನು ಸುಮಾರು 21 ವರ್ಷಗಳ ಹಿಂದೆ ನೋಡಿದ್ದೇನೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲ. ಅವುಗಳನ್ನು ಹಾಜರುಮಾಡಿದ್ದಲ್ಲಿ ನಿಜಾಂಶ ಹೊರಗೆ ಬರುತ್ತದೆ ಎಂದು ಅವುಗಳನ್ನು ನಾವು ಹಾಜರುಪಡಿಸಿದ್ದು ಇರುವುದಿಲ್ಲ ಎಂದರೆ, ನಾವು ಹಾಜರುಮಾಡಿದ್ದು ಇರುತ್ತದೆ ಎಂದು ನುಡಿಯುತ್ತಾರೆ. ನಾನು ನನ್ನ ಅವಧಿಯಲ್ಲಿ ಮನೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಪಂಚಾಯಿತಿಗೆ ಅರ್ಜಿಗಳನ್ನು ಸಲ್ಲಿಸಿರುತ್ತೇನೆ. ಸದರಿ ದಾಖಲಾತಿಗಳು ನನ್ನ ಬಳಿ ಇವೆ. ಅವುಗಳನ್ನೂ ಸಹ ನಾನು ಹಾಜರುಮಾಡಿದ್ದು ಇರುವುದಿಲ್ಲ ಎಂದರೆ, ವಕೀಲರ ಬಳಿ ಇದೆ ಎಂದು ನುಡಿಯುತ್ತಾರೆ. ಒಂದುವೇಳೆ ನಾನು ದಾಖಲಾತಿಗಳನ್ನು ನಮ್ಮ ವಕೀಲರ ಬಳಿ ಕೊಟ್ಟಿದ್ದರೇ ಅವರು ಹಾಜರುಮಾಡುತ್ತಿದ್ದರು ಎಂದರೆ, ಹಾಜರುಮಾಡುತ್ತಾರೆ ಎಂದು ನುಡಿಯುತ್ತಾರೆ. ತಕರಾರು ಮತ್ತು ಮುಖ್ಯ ವಿಚಾರಣೆಯನ್ನು ಹೊರತುಪಡಿಸಿ, ಇಂತಹ ಊರಿನಲ್ಲಿ ನಮಗೆ ಸಂಬಂಧಿಸಿದ ಇಂತಹ ಆಸ್ತಿ ಇದೆ ಎಂದು ತೋರಿಸಲು, ನ್ಯಾಯಾಲಯದ ಮುಂದೆ ಯಾವುದೇ ದಾಖಲಾತಿಗಳು ಇಲ್ಲ ಎಂದರೆ, ನಮ್ಮ ಬಳಿಯೂ ಇದೆ, ಅವರ ಬಳಿಯೂ ಇದೆ, ಹಾಜರು ಮಾಡುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಛಾಯಾ ಚಿತ್ರವನ್ನು ನಮ್ಮ ವಕೀಲರ ಬಳಿ ಕೊಟ್ಟಿದ್ದೇನೆ.

ಸಾಕ್ಷಿಗೆ ಎರಡು ಛಾಯಾ ಚಿತ್ರಗಳನ್ನು ತೋರಿಸಿ, ಅವುಗಳಲ್ಲಿ ಕಾಣುವುದು ದಾವಾಸ್ತಿ ಅದು ಬಸವಣ್ಣೆಪ್ಪರವರ ಮನೆ ಅಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಅವುಗಳನ್ನು ಇನ್ನೊಂದು ಬಾರಿ ತೋರಿಸಿ, ನಾವು ದಾವಾಸ್ತಿಗೆ ಅಕ್ರಮ ಪ್ರವೇಶ ಮಾಡಿ , ಬಾಗಿಲಿಗೆ ಹಾಕಿದ ಬೀಗ್ ಎಂದರೆ ಸರಿಯಲ್ಲ.

ನಂದಿಕಟ್ಟಾ ಗ್ರಾಮದ ಸರ್ವೇ ನಂಬರ್ 227/1 ರಲ್ಲಿರುವ ವಾದಿಗೆ ಸಂಬಂಧಿಸಿದ 3 ಎಕರೆ 27 ಗುಂಟೆ ಜಮೀನಿಗೆ ಸಂಬಂಧಿಸಿದ ಪಹಣಿಯನ್ನು ತೋರಿಸಿ, ವಾದಿಗೆ ನಂದಿಕಟ್ಟಾ ಗ್ರಾಮದಲ್ಲಿ ಆ ಜಮೀನು ಇದೆ ಎಂದು ಕೇಳಲಾಗಿ, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿಗೆ ಸಂಬಂಧಿಸಿದಂತೆ ವಾದಿಯು ಸುಮಾರು 10 ದಾಖಲಾತಿಗಳನ್ನು ಹಾಜರುಪಡಿಸಿದ್ದಾರೆ ಎಂದರೆ, ಅವೆಲ್ಲ ಸುಳ್ಳು ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು )**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**